ಜಾನುವಾರುಗಳನ್ನು ಹುಲಿ ತಿಂದಾಗ ನೀಡುವ ಪರಿಹಾರದ ಬಗ್ಗೆ

೧೫೨೪. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯ ಮಲೆನಾಡು ತಾಲ್ಲೂಕುಗಳಲ್ಲಿ ಜಾನುವಾರುಗಳನ್ನು ಹುಲಿಯು ತಿಂದಿರುವ ಪ್ರಕರಣಗಳೆಷ್ಟು ?

ಆ) ಈ ಪ್ರಕರಣಗಳಲ್ಲಿ ನೊಂದವರಿಗೆ ಪರಿಹಾರ ಕೊಡಲಾಗಿದೆಯೇ ?

ಇ) ಎರಡು ವರ್ಷಗಳಿಂದ ಪರಿಹಾರ ಕೊಟ್ಟಿಲ್ಲ ಇದು ನಿಜವೆ ?

ಈ) ಹೊಸನಗರ ತಾಲ್ಲೂಕಿನಲ್ಲಿ ಒಂದೇ ರೈತರ ೪–೫ ಜಾನುವಾರುಗಳನ್ನು ಹುಲಿ ಹಿಡಿದು ಹಿಡಿದು ತಿಂದಿರುವುದು ನಿಜವೆ ?

ಉ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶ್ ಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು)—

ಅ) ೧೯೮೪–೮೫ ರಿಂದ ಜನವರಿ ೧೯೮೭ರ ವರೆಗೆ ೩೨೩ ಪ್ರಕರಣಗಳು.

ಆ) ಹೌದು.

ಇ) ನಿಜವಲ್ಲ. ಪರಿಹಾರ ಕೊಟ್ಟಿದ್ದೇವೆ.

ಈ) ಇಂತಹ ಪ್ರಸಂಗ ಗಮನಕ್ಕೆ ಬಂದಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಸಿರು ಕಾರ್ಡ್ ಹಂಚಿಕೆಯಲ್ಲಿ ಆಗಿರುವ ಅನ್ಯಾಯದ ಬಗ್ಗೆ

೭೬೦. ಶ್ರೀ ಡಿ. ಬಿ. ಜಯಕುಮಾರ್ (ನಂಜನಗೂಡು).— ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ತಾಲ್ಲೂಕಿನಲ್ಲಿ ಎಷ್ಟು ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ಹಂಚಲಾಗಿದೆ ಹಾಗೂ ಎಷ್ಟು ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲಾಗಿದೆ ?

ಆ) ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಾಸಿಸುವ ಕಡುಬಡವರಿಗೆ ಹಸಿರು ಕಾರ್ಡುಗಳನ್ನು ಹಂಚಲು ಸರ್ಕಾರದವರು ನಿರ್ಧರಿಸುವರೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು)—

ಅ) ೨೭,೬೭೪ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ಹಂಚಲಾಗಿದೆ. ಹಾಗೂ ೧೦೦ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗಿದೆ.

ಆ) ಇಲ್ಲ.

ಹೊಸನಗರ ತಾಲ್ಲೂಕಿನ ವೈದ್ಯಾಧಿಕಾರಿಗಳ ಹುದ್ದೆಗಳು

೧೫೧೬. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಹೊಸನಗರ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳೆಷ್ಟು ?

(ಅ) ಯಾವ ಯಾವ ಆಸ್ಪತ್ರೆಗಳಿಗೆ ಎಷ್ಟು ಜನ ವೈದ್ಯರು ಮತ್ತು ಮಹಿಳಾ ವೈದ್ಯರುಗಳ ಹುದ್ದೆಗಳು ಖಾಲಿ ಇವೆ ಹಾಗೂ ಎಷ್ಟು ದಿನಗಳಿಂದ ಖಾಲಿ ಇವೆ.

(ಇ) ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ ಖಾಲಿ ಇಡಲಾಗಿದೆ

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

(ಅ) ೧೦

(ಆ) ವಿವರಗಳನ್ನು ಕೆಳಗೆ ಒದಗಿಸಿದೆ.—

ಕ್ರಮ ಸಂಖ್ಯೆ	ಆಸ್ಪತ್ರೆಯ ಹೆಸರು	ಮಂಜೂರಾತಿ ಹುದ್ದೆ		ಕೆಲಸ ಮಾಡುತ್ತಿರುವವರ		ಖಾಲಿ ಇರುವುದು		ಖಾಲಿ ಇರುವುದಕ್ಕೆ ಕಾರಣ
		ಪುರುಷ ವೈದ್ಯಾಧಿಕಾರಿ	ಮಹಿಳಾ ವೈದ್ಯಾಧಿಕಾರಿ	ಪುರುಷ ವೈದ್ಯಾಧಿಕಾರಿ	ಮಹಿಳಾ ವೈದ್ಯಾಧಿಕಾರಿ	ಪುರುಷ ವೈದ್ಯಾಧಿಕಾರಿ	ಮಹಿಳಾ ವೈದ್ಯಾಧಿಕಾರಿ	
೧	ಸಾರ್ವಜನಿಕ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಹೊಸನಗರ	೩	೧	೧	೧	೦	೨	೨೬-೬-೧೯೮೬ ಮೇ ೭೯ ರಿಂದ
೨	ಪ್ರಾಥಮಿಕ ಆರೋಗ್ಯ ಕೇಂದ್ರ ರಿಪ್ಪನ್‌ಪೇಟೆ	೧	—	೧	—	—	—	
೩	ಪ್ರಾಥಮಿಕ ಆರೋಗ್ಯ ಘಟಕ ನಗರ	೧	೧	೧	—	—	೧	೨೬-೬-೧೯೮೬
೪	ಪ್ರಾಥಮಿಕ ಆರೋಗ್ಯ ಘಟಕ ಹರಿದ್ರಾವತಿ	೧	—	೧	—	—	—	
೫	ಪ್ರಾಥಮಿಕ ಆರೋಗ್ಯ ಘಟಕ ಕೊಡೂರು	೧	—	—	—	೧	—	ಜೂನ್ ೧೯೮೨
೬	ಪ್ರಾಥಮಿಕ ಆರೋಗ್ಯ ಘಟಕ ನಿಟ್ಟೂರು	೧	—	—	—	೧	—	೩-೧೨-೧೯೮೫
೭	ಪ್ರಾಥಮಿಕ ಆರೋಗ್ಯ ಘಟಕ ಸಂಪಕಟ್ಟೆ	೧	—	—	—	೧	—	೧೨-೯-೧೯೮೬
೮	ಪ್ರಾಥಮಿಕ ಆರೋಗ್ಯ ಘಟಕ ಸೋನಾಲೆ	೧	—	—	—	೧	—	೧೦-೭-೧೯೮೬
೯	ಪ್ರಾಥಮಿಕ ಆರೋಗ್ಯ ಘಟಕ ಯಡೂರು	೧	—	೧	—	—	—	—
	ಒಟ್ಟು	೧೧	೨	೫	೧	೬	೧	

(ಇ) ವೈದ್ಯರ ಅಭಾವದಿಂದಾಗಿ